ಅನುಭವಿಸಿದ ಅಡ್ಡ ಪರಿಣಾಮಗಳು.

ಜಗತ್ತಿನ ಅತಿದೊಡ್ಡ ಜಲಪಾತ ಎಂಬ ಹಿರಿಮೆಗೆ ಒಳಗಾದ ಆಫ್ರಿಕಾದ 'ವಿಕ್ಟೋರಿಯಾ ಫಾಲ್ಸ್' ಮೊನ್ನೆ ಮೊನ್ನೆಯಷ್ಟೇ ಬತ್ತಿ ಹೋಗಿದೆ. ನೀರ್ಗಲ್ಲುಗಳಿರುವ ಆರ್ಕಟಿಕ್ ಹಾಗೂ ಅಂಟಾರ್ಟಿಕ್ ಮಹಾಸಾಗರಗಳ ಮೇಲೂ ಈ ವರ್ಷದ ಹವಾಮಾನ ಬದಲಾವಣೆ ನೇರ ಪರಿಣಾಮ ಬೀರಿದೆ. ಈ ಸಾಗರಗಳ ಹಿಮಗಡ್ಡೆಗಳು ನಿಧಾನಕ್ಕೆ ಕರಗಲು ಆರಂಭಿಸಿವೆ. ಹಿಮಗಡ್ಡೆಗಳು ಕರಗುವ ಪ್ರಮಾಣ ಹೆಚ್ಚುತ್ತಾ ಹೋದರೆ ಸಮುದ್ರಗಳ ಮಟ್ಟ ಹೆಚ್ಚಾಗಿ ಭೂಮಿಗೆ ಅಪಾಯ ಕಟ್ಟಿಟ್ಟ ಬುತ್ತಿ.

ನಿಸರ್ಗದ ಮೇಲೆ ಮನುಷ್ಯ ಲಂಗು ಲಗಾಮಿಲ್ಲದೆ ನಡೆಸಿದ ಆಕ್ರಮಣದಿಂದ ಇಡೀ ಜಗತ್ತೇ ಹವಾಮಾನ ತುರ್ತು ಪರಿಸ್ಥಿತಿಯಲ್ಲಿ ಸಿಲುಕಿದೆ ಎಂದು 153 ದೇಶಗಳ 11,258 ವಿಜ್ಞಾನಿಗಳು ಒಕ್ಕೊರಲಿನಿಂದ ಧ್ವನಿ ಎತ್ತಿದ್ದೂ ಇದೇ ವರ್ಷ. ಹಸಿರುಮನೆ ಅನಿಲ ಹೊರಸೂಸುವಿಕೆ ಮತ್ತು ಹವಾಮಾನ ಬದಲಾವಣೆಗೆ ಕಾರಣವಾಗಬಲ್ಲ ಚಟುವಟಿಕೆಗಳಲ್ಲಿ ಪರಿಣಾಮಕಾರಿ ಹಾಗೂ ದೀರ್ಘಾವಧಿ ಬದಲಾವಣೆಗಳನ್ನು ಮಾಡಿಕೊಳ್ಳದಿದ್ದರೆ 'ಈವರೆಗೆ ಕಂಡುಕೇಳಿಲ್ಲದ ವೇದನೆ' ಅನುಭವಿಸಬೇಕಾದೀತು ಎಂಬುದು ಅವರು ನೀಡಿದ ಎಚ್ಚರಿಕೆ.

ವರ್ಷಾಂತ್ಯದಲ್ಲಿ ಮ್ಯಾಡ್ರಿಡ್‌ನಲ್ಲಿ ನಡೆದ ಜಾಗತಿಕ ಹವಾಮಾನ ಸಮಾವೇಶದಲ್ಲೂ ಕಾರ್ಬನ್ ಹೆಜ್ಜೆತೂಕ ಕಡಿಮೆ ಮಾಡುವುದಕ್ಕೆ 'ತೂಕ'ದ ಪರಿಹಾರವೇನೂ ದಕ್ಕಲಿಲ್ಲ. ಮಾಲಿನ್ಯ ನಿಯಂತ್ರಣದ ಕಾರ್ಯಕ್ಷಮತೆಯ ಸೂಚ್ಯಂಕದಲ್ಲಿ ಭಾರತಕ್ಕೆ ಒಂಬತ್ತನೇ ಸ್ಥಾನವೇನೋ ಲಭಿಸಿದೆ. ನಾವು ಹವಾಮಾನ ನೀತಿಯನ್ನು ಹೊಂದಿದ್ದರೂ (ಸೂಚ್ಯಂಕ ನೀಡುವಾಗ ನೀತಿಯನ್ನೂ ಪರಿಗಣಿಸಲಾಗುತ್ತದೆ) ಹವಾಮಾನ ಸಂಕಷ್ಟಕ್ಕೆ ಕಾರಣವಾಗುವ ಇಂಧನ ಬಳಕೆಯಲ್ಲಿ ಮುಂದೆಯೇ ಇರುವಾಗ ಸಂಭ್ರಮಪಡುವುದರಲ್ಲಿ ಯಾವ ಅರ್ಥವಿದೆ? ■

## ಗ್ರೇಟ್ ಗ್ರೇಟಾ

ವಿಶ್ವಸಂಸ್ಥೆ ಆಯೋಜಿಸಿದ್ದ ಜಾಗತಿಕ ಹವಾಮಾನ ಶೃಂಗಸಭೆಯಲ್ಲಿ ವಿಶ್ವದ ನಾಯಕರದು ಈ ವರ್ಷವೂ ಎಂದಿನಂತೆ ಬಾಯಿ ಉಪಚಾರದ ಮಾತು. ಇಂತಹ ಬೂಟಾಟಿಕೆಯ ವಿರುದ್ಧ 16 ಹರೆಯದ ಕಿಶೋರಿ, ಸ್ವೀಡನ್‌ನ ಪರಿಸರ ಹೋರಾಟಗಾರ್ತಿ ಗ್ರೇತಾ ಥನ್‌ಬರ್ಗ್ 'ಹೌ ಡೇರ್ ಯು' (ನಿಮಗೆಷ್ಟು ಧೈರ್ಯ) ಎಂಬ ಧ್ವನಿ ಗುಡುಗಿನಂತೆ ಮೊಳಗಿದೆ. 'ಭವಿಷ್ಯಕ್ಕಾಗಿ ಶುಕ್ರವಾರ' ಹೆಸರಿನಲ್ಲಿ ಅವಳು ಆರಂಭಿಸಿದ ಹವಾಮಾನ ಸಂಕಷ್ಟದ ವಿರುದ್ಧದ ಹೋರಾಟಕ್ಕೆ ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಕೋಟಿ, ಕೋಟಿ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಬೆಂಬಲ ಸಹ ಸಿಕ್ಕಿದೆ. ಅಂದಹಾಗೆ, ಬದಲಿ ನೊಬೆಲ್ ಎನಿಸಿದ 'ರೈಟ್ ಲೈವ್ಲಿ ಹುಡ್' ಪ್ರಶಸ್ತಿ ಇದೇ ವರ್ಷ ಗ್ರೇತಾಳನ್ನು ಹುಡುಕಿಕೊಂಡು ಬಂದಿದೆ. ಟೈಮ್ಸ್ ಮ್ಯಾಗಝಿನ್‌ನ 2019 ವರ್ಷದ ವ್ಯಕ್ತಿಯಾಗಿ ಈ ಕಿಶೋರಿ ಆಯ್ಕೆಯಾಗಿರುವುದು ಹವಾಮಾನ ಸಂಕಷ್ಟವೇ ವರ್ಷದ ಅತ್ಯಂತ ಚರ್ಚೆಯ ವಿಷಯವಾಗಿತ್ತು ಎಂಬುದರ ದ್ಯೋತಕ. ಇಷ್ಟೊಂದು ಕಿರಿಯ ವಯಸ್ಸಿನ ಸಾಧಕರು ಯಾರೂ ಇದುವರೆಗೆ 'ಟೈಮ್ಸ್ ವರ್ಷದ ವ್ಯಕ್ತಿ'ಯಾಗಿ ಆಯ್ಕೆಯಾಗಿರಲಿಲ್ಲ. ಪರಿಸರದ ರಕ್ಷಣೆಗೆ ಗ್ರೇತಾ ತುಳಿದ ಹೆಜ್ಜೆಗೆ ಸಿಕ್ಕ ಗೌರವವೂ ಇದಾಗಿದೆ.



ರಾಜಕೀಯ ನಾಯಕರ ಗೃಹಬಂಧನ ಮುಂದುವರಿದಿದೆ. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರತಿಪಾದಿಸಿದ್ದ 'ಇನ್ಸಾನಿಯತ್, ಜಮೂರಿಯತ್, ಕಾಶ್ಮೀರಿಯತ್' (ಮಾನವೀಯತೆ, ಪ್ರಜಾಪ್ರಭುತ್ವ, ಕಾಶ್ಮೀರದ ಸಾಂಸ್ಕೃತಿಕ ಪ್ರಜ್ಞೆ) ತತ್ವ ಈಗ ಸಂಪೂರ್ಣವಾಗಿ ಹಿಂದೆ ಸರಿದಿದೆ. 'ಕಣಿವೆಯಲ್ಲಿ ಭಯಾನಕ ಸ್ಥಿತಿ ಇದೆ' ಎಂದು ಸ್ವತಃ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಭಾರತದ ಈ ಭೂಶಿರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎಂಬ ಕೂಗೂ ಜೋರಾಗಿ ಕೇಳಿಬರುತ್ತಿದೆ. ■

## ಹೋಯ್ತು ವಿಶೇಷ ಸೌಲಭ್ಯ

ಜಮ್ಮು ಮತ್ತು ಕಾಶ್ಮೀರದ ನಾಗರಿಕರಿಗೆ ಮಾತ್ರ ಆಸ್ತಿ, ಶಿಕ್ಷಣ, ಉದ್ಯೋಗದಲ್ಲಿ ವಿಶೇಷ ಅಧಿಕಾರ ನೀಡುತ್ತಿದ್ದ ಸಂವಿಧಾನದ 35–ಎ ಕಲಂ ಸಹ ಈಗ ರದ್ದುಗೊಂಡಿದೆ. ಈ ಕಲಂ ರದ್ದುಗೊಳ್ಳುವ ಮೊದಲು ಅಲ್ಲಿನ ಕಾಯಂ ನಿವಾಸಿಗಳನ್ನು ಬಿಟ್ಟು ಹೊರಗಿನವರು ಯಾರೂ ಅಲ್ಲಿ ಸ್ಥಿರ ಆಸ್ತಿ ಹೊಂದುವಂತಿರಲಿಲ್ಲ. ಅಲ್ಲಿನ ಮಹಿಳೆ, ರಾಜ್ಯದ ಹೊರಗಿನವರನ್ನು ಮದುವೆಯಾದರೆ ಈ ಕಲಂ ಒದಗಿಸಿದ್ದ ವಿಶೇಷ ಸೌಲಭ್ಯಗಳಿಂದ ವಂಚಿತಳಾಗುತ್ತಿದ್ದಳು. ಈಗ ಅದು ರದ್ದಾಗಿದ್ದರಿಂದ ದೇಶದ ಯಾವುದೇ ಪ್ರಜೆ ಅಲ್ಲಿ ಆಸ್ತಿ ಖರೀದಿ ಮಾಡಬಹುದಾಗಿದೆ.


ಸಂಧಿಲಿನ್
SANDHILIN सन्धिलिन
ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
CLINICALLY PROVED




◆ ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.
ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.